## <u>ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಸಿರುಗುಪ್ಪ</u>

**<u>ಸಿ.ಸಿ. ಸಂಖ್ಯೆಃ 354/2023</u>**

**ಫಿರ್ಯಾದುದಾರರು ಃ** **Central Bank of India, represented by**
ಆಟೂಲ್ ಕುಮಾರ್ ಜೇಶ್ವಾಲ್

**- ವಿರುದ್ಧ -**

**ಆರೋಪಿ ಃ** ಶ್ರೀಮತಿ ವಿ.ಈರಮ್ಮ

**ಃ <u>ಆ ಪಾ ದ ನೆ</u> ಃ**

**ಶ್ರೀ ಹಾಜಿಹುಸೇನಸಾಬ ಯಾದವಾಡ, ಬಿ.ಕಾಂ, ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಿರುಗುಪ್ಪ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ.**

* * *

ಆಪಾದಿತರಾದ ನೀವು ಮತ್ತು ಫಿರ್ಯಾದುದಾರರ **ಬ್ಯಾಂಕಿನಲ್ಲಿ** ದಿಃ 24.10.2020 ರಂದು ನಿಮ್ಮ ಕುಟುಂಬದ ಅವಶ್ಯಕತೆಗಳಿಗೋಸ್ಕರ **ರೂ.**10,00,000/- **(ಹತ್ತು ಲಕ್ಷ ರೂಪಾಯಿಗಳು)** ಹಣವನ್ನು ಸಾಲವಾಗಿ ಪಡೆದಿದ್ದು, **ಪ್ರತಿ ತಿಂಗಳು ರೂ.**9,713/- **ರಂತೆ** 84 **ಕಂತುಗಳೊಳಗಾಗಿ** ಮರುಪಾವತಿಸುವುದಾಗಿ ಹೇಳಿರುತ್ತೀರಿ. ಸದರಿ ಹಣದ ಮರುಪಾವತಿಗಾಗಿ **ಪಿರ್ಯಾದುದಾರರು ಪುನಃ ಪುನಃ ವಿನಂತಿಸಿಕೊಂಡಾಗ** ನೀವು ಫಿರ್ಯಾದುದಾರರಿಗೆ 12.01.2023 ರ ದಿನಾಂಕ ನಮೂದಿಸಿದ **ಸೆಂಟರಲ್ ಬ್ಯಾಂಕ್ ಆಫ್ ಇಂಡಿಯಾ,ಇಟಗಿಹಾಳ್ (ಅಗಸನೂರು)** ಶಾಖೆಯ ಚೆಕ್ ಸಂಖ್ಯೆಃ 001161 ನ್ನು **ರೂ.**10,06,083 **ಗಳಿಗೆ** ನೀಡಿದ್ದು, ನಂತರ ನಿಮ್ಮ ಆಶ್ವಾಸನೆಯಂತೆ ಫಿರ್ಯಾದುದಾರರು ಚೆಕ್ ನಗ **ನಗಧೀಕರಣ**ಕ್ಕಾಗಿ ದಿಃ 12.01.2023 ರಂದು **ಸೆಂಟರಲ್ ಬ್ಯಾಂಕ್ ಆಫ್ ಇಂಡಿಯಾ, ಇಟಗಿಹಾಳ್** ಶಾಖೆಯಲ್ಲಿರುವ ತಮ್ಮ ಖಾತೆಯ ಮೂಲಕ ಚೆಕ್ಕನ್ನು ಸಲ್ಲಿಸಿದಾಗ ನಿಮ್ಮ ಖಾತೆಯಲ್ಲಿ “Funds Insufficient” ಎಂಬ ಹಿಂಬರಹದೊಂದಿಗೆ ಸದರಿ ಚೆಕ್ಕು ವಾಪಸ್ಸಾಗಿರುತ್ತದೆ. ನಂತರ ಸದರಿ ವಿಚಾರದಲ್ಲಿ ಫಿರ್ಯಾದುದಾರರು ಆಪಾದಿತರಾದ ನಿಮಗೆ ದಿಃ 21.01.2023 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸ್ ಕಳುಹಿಸಿದ್ದು, ಅದು ನಿಮಗೆ ದಿಃ 23.01.2023 ರಂದು ಜಾರಿಯಾಗಿದ್ದರೂ

ಸಹಾ ಆಪಾದಿತರಾದ ನೀವು ಹಣವನ್ನು ಕೊಟ್ಟಿರುವುದಿಲ್ಲ ಮತ್ತು ಸದರಿ ನೊಟೀಸ್‌ಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಕಲಂ 138 ವರ್ಗಾವಣೀಯ ಲಿಖಿತಗಳ ಅಧಿನಿಯಮ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತೀರಿ  ಎಂದು ಆಪಾದಿಸಲಾಗಿದೆ._

**ಪ್ರಶ್ನೆಃ- 1 ಃ ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೇ?**
**ಉತ್ತರಃ**

**ಪ್ರಶ್ನೆಃ- 2 ಃ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪರ ಪ್ರತಿರಕ್ಷಣೆ ಇದೆಯೇ?**
**ಉತ್ತರಃ**

**ದಿನಾಂಕಃ 03.07.2023 ರಂದು ಆರೋಪಿಗೆ ಆಪಾದನೆ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಆಕೆಯು ಕೊಟ್ಟ ಹೇಳಿಕೆಯನ್ನು ನನ್ನ ಸಮಕ್ಷಮ ಬರೆದುಕೊಂಡು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ.**

**(ಹಾಜಿಹುಸೇನಸಾಬ ಯಾದವಾಡ)**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಸಿರುಗುಪ್ಪ